ಬೇಕಾಗಿದೆ. ಇದನ್ನು ಕ್ರೋಢೀಕರಿಸಿಕೊಂಡು ಈ ಕ್ರೀಡಾಂಗಣಗಳನ್ನು ಪೂರ್ತಿ ಮಾಡಿದರೆ ನಮ್ಮ ಗ್ರಾಮಾಂತರ ಮಕ್ಕಳೂ ಕೂಡ ಕ್ರೀಡೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆ. ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ, ಅಂದರೆ ಸಂಘ ಸಂಸ್ಥೆಗಳನ್ನು ಎಲ್ಲವನ್ನೂ ಸೇರಿಸಿಕೊಂಡು ಒಂದು ಹೈಪವರ್ ಕಮಿಟಿ ಎಂದು ಮಾಡಿ ಮುಖ್ಯಮಂತ್ರಿಯವರೇ ಇದರ ಬಗ್ಗೆ ಗಮನವನ್ನು ಹರಿಸಿದರೆ ಈ ಒಂದು ಕ್ರೀಡಾಂಗಣಗಳು ಪೂರ್ತಿಯಾಗುತ್ತದೆ. ಮತ್ತು ಕ್ರೀಡೆಗಳಿಗೆ ಹಣವನ್ನು ಕೊಡ ತಕ್ಕಂಥವರು ಬಹಳ ಜನರು ಇದ್ದಾರೆ. ಅದು ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲೇ ಆಗಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎಂ. ದಿವಾಕರ ಬಾಬು(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ರಾಜ್ಯ ಸಚಿವರು) :- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ನಮ್ಮ ಕ್ರೀಡಾಗಾರರು ಆಂಧ್ರಪ್ರದೇಶದಲ್ಲಿ ಹೋಗಿ ರೆಫೆಸೆಂಟ್ ಮಾಡಿರುವುದು ನಿಜ. ಇದು ನಮ್ಮ ಕರ್ನಾಟಕದವರು ಒಂದೇ ಅಲ್ಲ, ಪ್ರತಿಯೊಂದು ರಾಜ್ಯದ ಬಹಳಷ್ಟು ಜನ ಕ್ರೀಡಾಗಾರರು ಆಂಧ್ರಪ್ರದೇಶಕ್ಕೆ ಬಹಳಷ್ಟು ಹಣವನ್ನು ಕೊಡುತ್ತಿದ್ದಾರೆ, ಫ್ರೆ ಜ್ ಮನಿಯನ್ನು ಕೊಡುತ್ತಿದ್ದಾರೆ ಎನ್ನುವ ಉದ್ದೇಶದಿಂದ ಹೋಗಿದ್ದಾರೆ. ಇದನ್ನು ಈಗಾಗಲೇ ನಮ್ಮ ಮುಖ್ಯಮಂತ್ರಿಯವರು ಹೇಳಿದ್ದಾರೆ. ಇದನ್ನು ಮುಂದೆ ನಾವು ಸರಿಪಡಿಸಿ ನಮ್ಮ ಕ್ರೀಡಾಗಾರರನ್ನು ನಾವೇ ಪ್ರೋತ್ಸಾಹ ಮಾಡುತ್ತೇವೆಂದು ಹೇಳಿದ್ದಾರೆ. ಹಾಗೆಯೇ 80 ಕ್ರೀಡಾಂಗಣಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಅದರಲ್ಲಿ 51 ಪೂರ್ತಿಯಾಗುವ ಸ್ಥಿತಿಯಲ್ಲಿದೆ. ಇನ್ನು ಮಿಕ್ಕಿದ್ದನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಪ್ರಶ್ನೆ ಸಂಖ್ಯೆ:97 (938)

ಅಧ್ಯಕ್ಷರು:- ಮಾನ್ಯ ಮಹಾಲಿಂಗಪ್ಪನವರೇ, ತಮ್ಮ ಪ್ರಶ್ನೆಗೆ ಸ್ವಲ್ಪ ಟೈಮ್ ಬೇಕೆಂದು ಕೇಳಿದ್ದಾರೆ. ಇನ್ನೊಂದು ವಾರ ತೆಗೆದುಕೊಳ್ಳೋಣ ಬಿಡಿ.

ಪ್ರಶ್ನೆ ಸಂಖ್ಯೆ: 98 (794)

ಅಧ್ಯಕ್ಷರು:- ಮಾನ್ಯ ಬೆಲ್ಲದ್‌ರವರೇ, ಉತ್ತರಕ್ಕಾಗಿ ಅವರು ಒಂದು ತಿಂಗಳ ಕಾಲಾವಕಾಶ ಕೋರಲಾಗಿದೆ ಎಂದು ಬರೆದಿದ್ದಾರೆ. ತರಿಸೋಣ ಬಿಡಿ.

ಆರಾಧನಾ ಯೋಜನೆ

99 (1022) ಶ್ರೀ ಸಭಾಪತಿ ಯು.ಆರ್. (ಉಡುಪಿ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002 2002-2003ರ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಬಿಡುಗಡೆಯಾದ ಹಣ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡಿರಿ);

ಆ) 2001-2002, 2002-2003ರ ಸಾಲಿನಲ್ಲಿ ಆರಾಧನಾ ಯೋಜನೆಯಡಿ ಉಡುಪಿ ಜಿಲ್ಲೆಗೆ ಬಿಡುಗಡೆಯಾದ ಹಣ ಎಷ್ಟು? (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ನೀಡಿರಿ)?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

ಅ) 2001-2002ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿ ರೂ. 490-00 ಲಕ್ಷಗಳ ಬಿಡುಗಡೆ ಮಾಡಿದೆ. (ಜಿಲ್ಲಾವಾರು ವಿವರ ಲಗತ್ತಿಸಿದೆ)

2002-2003ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಆ) 2001-2002ನೇ ಸಾಲಿಗೆ ಆರಾಧನಾ ಯೋಜನೆಯಡಿ ಉಡುಪಿ ಜಿಲ್ಲೆಗೆ ರೂ. 12,72,726-00 ಗಳನ್ನು ಬಿಡುಗಡೆ ಮಾಡಿದೆ.

ವಿಧಾನ ಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

1)	ಉಡುಪಿ	ರೂ.2,12,121.00
2)	ಕಾರ್ಕಳ	ರೂ.2,12,121.00
3)	ಕುಂದಾಪುರ	ರೂ.2,12,121.00
4)	ಬೈಂದೂರು	ರೂ.2,12,121.00
5)	ಬ್ರಹ್ಮಾವರ	ರೂ.2,12,121.00
6)	ಕಾಪು	ರೂ.2,12,121.00
	ಒಟ್ಟು	ರೂ.12,72,726.00

2002-2003ನೇ ಸಾಲಿನಲ್ಲಿ ಇನ್ನೂ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಆರಾಧನಾ ಯೋಜನೆಯಡಿ 2001-02ನೇ ಸಾಲಿನಲ್ಲಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿದ ವಿಧಾನ ಸಭಾ ಕ್ಷೇತ್ರವಾರು ವಿವರ ಪಟ್ಟಿ

ಕ್ರ.ಸಂ.	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರವಾರು		ಬಿಡುಗಡೆ ಮಾಡಿದ ಮೊತ್ತ (ರೂ.ಲಕ್ಷಗಳಲ್ಲಿ)
1.	ಬೆಂಗಳೂರು ನಗರ	16		33,93,936.00
2.	ಬೆಂಗಳೂರು ಗ್ರಾಮಾಂತರ	9		19,09,089.00
3.	ತುಮಕೂರು	13		27,57,573.00
4.	ಕೋಲಾರ	12		25,45,452.00
5.	ದಾವಣಗೆರೆ	02		14,84,847.00
6.	ಮೈಸೂರು	11		23,33,331.00
7.	ಮಂಡ್ಯ	09		19,09,089.00
8.	ದಕ್ಷಿಣ ಕನ್ನಡ	09		19,09,089.00
9.	ಕೊಡಗು	03		6,36,363.00
10.	ಹಾಸನ	08		16,96,968.00
11.	ಚಿಕ್ಕಮಗಳೂರು ತಾಲ್ಲೂಕು	03	ಒಟ್ಟು	16,96,968.00
	ವಿ.ಸಭಾಕ್ಷೇತ್ರ	05		
12.	ಶಿವಮೊಗ್ಗ	08		16,96,968.00
13.	ಬೆಳಗಾಂ	18		38,18,178.00
14.	ಧಾರವಾಡ	07		14,84,847.00
15.	ಬಿಜಾಪುರ	08		16,96,968.00
16.	ಉತ್ತರ ಕನ್ನಡ ತಾಲ್ಲೂಕುವಾರು	11		23,33,331.00
17.	ಗುಲ್ಬರ್ಗಾ	13		27,57,573.00
18.	ಬಳ್ಳಾರಿ	08		16,96,968.00

1	2	3	4
19.	ರಾಯಚೂರು	06	12,72,726.00
20.	ಬೀದರ್	06	12,72,726.00
21.	ಚಾಮರಾಜನಗರ	05	10,60,605.00
22.	ಬಾಗಲಕೋಟೆ	07	14,84,847.00
23.	ಗದಗ	06 (5)	10,60,605.00
24.	ಉಡುಪಿ	06	12,72,726.00
25.	ಹಾವೇರಿ	06	12,72,726.00
26.	ಚಿತ್ರದುರ್ಗ	07	14,84,847.00
27.	ಕೊಪ್ಪಳ	05	10,60,854.00
	ಒಟ್ಟು	217	4,90,00,000.00
	ತಾಲ್ಲೂಕು	14	
	ಒಟ್ಟು	231	

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೇ, ಆರಾಧನಾ ಯೋಜನೆಯಲ್ಲಿ ಈಗಾಗಲೇ ಹತ್ತು ಹಲವು ಸಂಸ್ಥೆಗಳನ್ನು ಸೇರ್ಪಡೆಗೊಳಿಸಲಾಗಿದೆ. ಉದಾ:ಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರತಕ್ಕಂಥ ಗರಡಿಗಳು, ಮತ್ತು ಅದೇ ರೀತಿ ಮಸೀದಿಗಳು ಚರ್ಚ್‌ಗಳು, ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು ಐವತ್ತಕ್ಕೂ ಅರ್ಜಿಗಳು ನಮ್ಮಲ್ಲಿ ಬಾಕಿ ಉಳಿದಿವೆ. ಈಗ ವಾರ್ಷಿಕವಾಗಿ ನಮಗೆ 2,12,121 ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಈ ಹಣ ಏತಕ್ಕೂ ಸಾಕಾಗುತ್ತಿಲ್ಲ. ನಾವು ಕನಿಷ್ಟ ಒಂದು ಸಂಸ್ಥೆಗೆ ಒಂದೊಂದು ದೇವಸ್ಥಾನಗಳಿಗೆ ಕನಿಷ್ಟ ಹತ್ತರಿಂದ 25 ಸಾವಿರ ರೂ.ಗಳನ್ನು ಕೊಡುವುದಾದರೆ ಕೂಡ ಈ ಹಣ ರೂ. 2.12.121 ಕೊಡಲಿಕ್ಕೆ ಬರುತ್ತಿರಲಿಲ್ಲ ಇದುವರೆಗೆ ಪ್ರಥಮ ಪ್ರಶ್ನೆಯಲ್ಲಿ ಕೇಳಿದ್ದಕ್ಕೆ 2002-03ನೇ ಸಾಲಿನಲ್ಲಿ ಅನುದಾನವನ್ನು ಇದುವರೆಗೆ ಬಿಡುಗಡೆ ಮಾಡಿರುವುದಿಲ್ಲವೆಂದು ಹೇಳಿದ್ದಾರೆ. ನಾವು ಈಗಾಗಲೇ 10ನೇ ಮಾರ್ಚ್‌ನಲ್ಲಿದ್ದೇವೆ. ಇನ್ನೂ ಈ ವರ್ಷದ ಕೊನೆಯಲ್ಲಿ ಕೂಡ ಹಣ ಬಿಡುಗಡೆಯಾಗದಿದ್ದರೆ ಇದನ್ನು ಯಾವ ರೀತಿ ಅಂಥ ಸಂಸ್ಥೆಗಳಿಗೆ ನಾವು ದೇವಸ್ಥಾನಗಳಿಗೆಲ್ಲಾ ಹಣ ಬಿಡುಗಡೆ ಮಾಡುವುದಾದರೂ ಹೇಗೆ? ಅವರಿಗೆಲ್ಲಾ ಯಾವ ರೀತಿ ಉತ್ತರ ಹೇಳಬೇಕೋ ನಮಗೆ ಅರ್ಥವಾಗುತ್ತಿಲ್ಲ. ಈ ಆರಾಧನಾ ಯೋಜನೆಯಲ್ಲಿ ಬರತಕ್ಕ ಅನುದಾನವನ್ನು ಹೆಚ್ಚಿಸಲಿಕ್ಕೆ ಮಂತ್ರಿಗಳೇನಾದರೂ ಪ್ರಯತ್ನವನ್ನು ಪಡುತ್ತಾರೋ ಅಥವಾ ಈ ಹಣವನ್ನು ಬಿಡುಗಡೆ ಮಾಡುವಾಗಲೂ ಕೂಡ ಅದನ್ನು ಸೂಕ್ತ ರೀತಿಯಲ್ಲಿ ಕನಿಷ್ಟ ಮೂರು ತಿಂಗಳಿಗೊಮ್ಮೆ ಹಣ ಬಿಡುಗಡೆಯಾಗುವ ಹಾಗೆ ಮಾಡುತ್ತಾರೆಯೇ ಎಂದು ತಮ್ಮೂಲಕ ನಾನು ಅವರನ್ನು ಕೇಳುತ್ತಿದ್ದೇನೆ.

ಶ್ರೀಮತಿ ಸುಮಾ ವಸಂತ್:- ಮಾನ್ಯ ಅಧ್ಯಕ್ಷರೇ, 2002-03ನೇ ಸಾಲಿನಲ್ಲಿ ಈಗ ಮೂರು ಕೋಟಿ ರೂ. ಅನುದಾನವೇನು ಬಂದಿದೆ ಇದನ್ನು ಇನ್ನೊಂದು ಎರಡು ದಿನಗಳಲ್ಲಿ ಬಿಡುಗಡೆ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ಅವರೇನು ಎರಡು ತಿಂಗಳಿಗೊಮ್ಮೆ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ, ಅದನ್ನು ಮಾಡುವುದಕ್ಕಾಗುವುದಿಲ್ಲ. ನಾವೂ ಕೂಡ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅದು

ಬಂದಕೂಡಲೇ ಅದನ್ನು ಬಿಡುಗಡೆ ಮಾಡುತ್ತೇವೆ ಮತ್ತು ಅವರೇನು ಹಣ ಹೆಚ್ಚಿಗೆ ಬೇಕೆಂದು ಹೇಳಿದ್ದಾರೆ, ಮುಂದಿನ 2003-04ನೇ ಸಾಲಿನಲ್ಲಿ ಹೆಚ್ಚಿಗೆ ಹಣವನ್ನು ಎಷ್ಟು ಸಾಧ್ಯವೋ ಅಷ್ಟು ಭರಿಸುವುದಕ್ಕೆ ಪ್ರಯತ್ನವನ್ನು ಪಡುತ್ತೇವೆ.

ಶ್ರೀ ಎನ್.ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾದ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಪ್ರತಿಯೊಂದು ಗಲ್ಲಿ ಗಲ್ಲಿಯಲ್ಲಿ ಸನ್ಯಾಸ್ಯ ಸಚಿವೆಯರಿಗೆ ಗೊತ್ತಿದೆ. ನಾವು ಅವರನ್ನು ಕರೆದುಕೊಂಡು ಹೋಗಿದ್ದೇವೆ. ಒಂದು ದೈವಸ್ಥಾನ, ಒಂದು ನಾಗಸ್ಥಾನ, ಒಂದು ಭೂತಸ್ಥಾನ, ಒಂದು ದೇವಸ್ಥಾನ ಎಲ್ಲಾ ಕಡೆಗಳಲ್ಲಿ ಜೀರ್ಣೋದ್ಧಾರ ಮತ್ತು ಬೇರೆ ಬೇರೆ ರೀತಿಯಲ್ಲಿ ಕೇಳುತ್ತಿದ್ದಾರೆ. ಮೂರುನಾಲ್ಕು ಲಕ್ಷ ರೂ.ಗಳ ಪ್ರಸ್ತಾವನೆಯನ್ನು ಇಟ್ಟುಕೊಂಡು ಬರುತ್ತಿದ್ದಾರೆ. ನಮಗೆ ಕನಿಷ್ಟ 50 ಸಾವಿರ, ಒಂದು ಲಕ್ಷ ರೂ.ಗಳನ್ನು ಕೊಡುವ ವ್ಯವಸ್ಥೆ ಮಾಡಿದರೆ ನಮಗೆ 25 ಲಕ್ಷ ರೂಪಾಯಿಗಳಾದರೂ ಒಂದು ಕ್ಷೇತ್ರಕ್ಕೆ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾನು ಸನ್ಯಾಸ್ಯ ಸಚಿವೆಯವರ ಹತ್ತಿರ ಕೇಳುವಂಥದ್ದು ಮತ್ತು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೇಳುವುದು ಆರಾಧನಾ ಸಮಿತಿಗೆ ಸಂಬಂಧಪಟ್ಟಂತೆ ಹೆಚ್ಚಿನ ಅನುದಾನವನ್ನು ತಾವು ಬಿಡುಗಡೆ ಮಾಡಬೇಕು. ಕನಿಷ್ಟ ಬಜೆಟ್ ಅಧಿವೇಶನದಲ್ಲಾದರೂ ಇದರ ಬಗ್ಗೆ ಘೋಷಣೆಯನ್ನು ಮಾಡಬೇಕೆಂದು ಹೇಳಿ ವಿನಂತಿಯನ್ನು ಮಾಡುತ್ತಾ ಇಲ್ಲಿ ಇನ್ನೊಂದು ಸಮಸ್ಯೆ ಏನೆಂದರೆ ಹಿಂದುಳಿದ ವರ್ಗದವರಿಗೆ ಸಂಬಂಧಪಟ್ಟು ನಮ್ಮಲ್ಲಿ ಬಿಲ್ಲವಾಸ್ ಸಾಕಷ್ಟು ಮೆಜಾರಿಟಿ ಸಂಖ್ಯೆಯಲ್ಲಿದ್ದಾರೆ. ಅದೇ ರೀತಿ ಹಿಂದುಳಿದ ವರ್ಗದವರು ಸಾಕಷ್ಟು ಇನ್ನಿತರ ಉಪಜಾತಿಗಳಿಗೆ ಸಂಬಂಧಪಟ್ಟವರು ಇದ್ದಾರೆ. ಅವರುಗಳಿಗೂ ಕೂಡ ಅದನ್ನು ಅನ್ವಯವಾಗುವ ರೀತಿಯಲ್ಲಿ ಮಾಡಿದರೆ ಮಾತ್ರ ಎಲ್ಲರಿಗೂ ಅದರ ಲಾಭವಾಗುತ್ತದೆ. ಇಲ್ಲದಿದ್ದರೆ ಕೆಲವೇ ಸಂಖ್ಯೆಯಲ್ಲಿ ಕೆಲವರಿಗೆ ಕೊಡುವುದಕ್ಕೆ ಹೋದಾಗ ಬೇರೆ ಕಡೆಗಳಿಂದ ಕೂಡ ಆಕ್ಷೇಪಣೆಗಳು ಬರುವ ಹಿನ್ನೆಲೆಯಲ್ಲಿ ತಮ್ಮೂಲಕ ನಾನು ವಿನಂತಿ ಮಾಡುವಂಥದ್ದು ಉಪಜಾತಿಗಳಲ್ಲಿ ಹಿಂದುಳಿದ ವರ್ಗ ಎಲ್ಲಾ ಪ್ರಮುಖ ವರ್ಗಗಳಿಗೂ ಕೂಡ ಕೊಡುವ ರೀತಿಯಲ್ಲಿ ಒಂದು ಅವಕಾಶವನ್ನು ತಾವು ಮಾಡಿಕೊಡಬೇಕೆಂದು ಹೇಳಿ ಕನಿಷ್ಟ 25 ಲಕ್ಷ ರೂಪಾಯಿಗಳನ್ನಾದರೂ ಕೂಡ ಒಂದು ಕ್ಷೇತ್ರಕ್ಕೆ ಕೊಡುವ ನಿಟ್ಟಿನಲ್ಲಿ ತಾವು ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಸುಮಾ ವಸಂತ್:- ಮಾನ್ಯ ಅಧ್ಯಕ್ಷರೇ, ಇದನ್ನೇ ನಾವು ಮನಗಂಡು 2002-03 ರಲ್ಲಿ ಸನ್ಯಾಸ್ಯ ಮುಖ್ಯಮಂತ್ರಿಗಳು ಆರು ಕೋಟಿ ರೂಪಾಯಿಗಳ ಅನುದಾನವನ್ನು ಕಳೆದ ಸಲದಲ್ಲಿ ಬಿಡುಗಡೆ ಮಾಡಿದ್ದರು. ಮುಂದಿನ ಸಾಲಿನಲ್ಲಿ ಕೂಡ ನಾವು ಹೆಚ್ಚಿಗೆ ಅನುದಾನವನ್ನು ಕೊಡಬೇಕೆಂದು ಹೇಳಿ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿಕೊಡುತ್ತಿದ್ದೇವೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೇ, ಈ ಆರಾಧನಾ ಅಡಿಯಲ್ಲಿ ಹಣವನ್ನು ಕೇಳಿದಾಗ ಬಹಳ ಸಲ ಉತ್ತರ ಬರುವಂಥದ್ದೇನೆಂದರೆ ನಮ್ಮಲ್ಲಿ ಹಣ ಇಲ್ಲ. ನನ್ನದೊಂದು ಸಲಹೆ ಇದೆ. ಏನೆಂದರೆ ನಮ್ಮಲ್ಲಿ ಅನೇಕ ದೇವಸ್ಥಾನಗಳು ಬಹಳ ಆದಾಯದಲ್ಲಿ ಮುಂದಿದ್ದಾವೆ. ಆ ಕ್ಷೇತ್ರದಲ್ಲಿ ಆ ಭಾಗದಲ್ಲಿರತಕ್ಕ ಬಡ ದೇವರುಗಳಿಗೆ, ಬಡ ದೇವಸ್ಥಾನಗಳಿಗೆ ಯಾರೂ ಹೋಗದೆ ಇರುವಂಥ ದೇವಸ್ಥಾನಕ್ಕೆ ಏತಕ್ಕೆ ಅಭಿವೃದ್ಧಿ ಮಾಡುವುದಕ್ಕೆ ಆ ದುಡ್ಡನ್ನು ಸರ್ಕಾರದವರು ಅದನ್ನು ಡ್ರಾ ಮಾಡಿ ಅವರಿಗೆ ಅಲಾಟ್ ಮಾಡುವಂಥ ಒಂದು ಪರಿಪಾಠವನ್ನು ಏತಕ್ಕೆ

ಬೆಳೆಸಿಕೊಳ್ಳಬಾರದೆನ್ನುವ ಸಲಹೆಯನ್ನು ನಾನು ಸರ್ಕಾರದ ಮುಂದೆ ತಮ್ಮ ಮುಖಾಂತರ ಇಡಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೇ, ಈ ಆರಾಧನಾ ಯೋಜನೆ ಇರಲಿ ಅಥವಾ ದೇವಸ್ಥಾನಗಳ ಜೀರ್ಣೋದ್ಧಾರ ಅಥವಾ ಹೊಸದಾಗಿ ಕಟ್ಟಡ ಕಟ್ಟುವುದಕ್ಕೆ ನಮ್ಮ ಸರ್ಕಾರದಲ್ಲಿ ವಾರ್ಷಿಕವಾದಂಥ ಬಜೆಟ್ಟೇ ಬಹಳ ಕಡಿಮೆ ಇದೆ. ಹಾಗಾಗಿ ಸರ್ಕಾರ ಇದಕ್ಕೆ ಹಚ್ಚಿನ ಹಣಕಾಸಿನ ಅವಕಾಶವನ್ನು ಕೊಡದೇ ಹೋದರೆ ಮಾನ್ಯ ಮುಖ್ಯಮಂತ್ರಿಗಳು ಎದ್ದು ಹೋಗಿ ಬಿಟ್ಟರು. ಅವರು ಹಣಕಾಸಿನ ಸಚಿವರೇ ಇದ್ದರು. ಅವರು ಮನಸ್ಸು ಮಾಡದ ಹೊರತು ಇದು ಆಗುವುದಿಲ್ಲ.

ಅಧ್ಯಕ್ಷರು:– ನನ್ನ ಅಂದಾಜಿನಲ್ಲಿ ಮೂರು ಕೋಟಿ ರೂ. ಬದಲಿಗೆ ನೂರು ಕೋಟಿ ಕೊಟ್ಟರೆ ಆಗ ಸ್ವಲ್ಪ ತೃಪ್ತಿಯಾಗುತ್ತದೆ ಅಷ್ಟೆ. ಐ ನೋ ದಟ್ ಒಂದೊಂದು ಊರಿನಲ್ಲೂ ನಾವು ದೇವಸ್ಥಾನಕ್ಕೆ ಹೋಗುತ್ತೇವೆ, ನಾವು ಪೂಜೆ ಮಾಡುತ್ತೇವೆಂದರೆ ನಾವೇ ಅವರಿಗೆ ಅಡ್ಡಿ ಪಡಿಸುತ್ತಿದ್ದೇವೆ.

ಶ್ರೀ ಡಿ.ವಿ. ಸದಾನಂದ ಗೌಡ:– ನೀವು ಬಹು ಕಾಲ ಸ್ಪೀಕರ್ ಆಗಿ ಉಳಿಯಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನೀವು ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬೇಕು. ಮಂತ್ರಿಗಳು ಕ್ಯಾಬಿನೆಟ್ ಸಚಿವರಾಗಿದ್ದಾರೆ ಅವರು ಈ ವಿಚಾರದಲ್ಲಿ ಹೆಚ್ಚಿನ ಗಮನ ತೆಗೆದುಕೊಂಡು ಬಜೆಟ್‌ನಲ್ಲಿ ಹೆಚ್ಚಿನ ಹಣಕಾಸಿನ ಅವಕಾಶ ಕೊಡಬೇಕು. ಬರೇ ಅನುದಾನವಲ್ಲ. ಬರೇ ರಾಜ್ಯದ ಜನ ಅಷ್ಟೇ ಅಲ್ಲ, ದೇವರೂ ಸಿಟ್ಟಿಗೆ ಏಳುತ್ತಾರೆ. ಜಾಸ್ತಿ ದುಡ್ಡು ಕೊಡಲಿಲ್ಲ ಎಂದರೆ; ಇವರ ಮೇಲೆ ದೇವರು ಸಿಟ್ಟಿಗೆ ಏಳುತ್ತಾರೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್:– ದೇವರಿಂದ ಬಂದ ದುಡ್ಡು ಕೊಟ್ಟರೆ ಬೇಕಾದಷ್ಟು ಆಗುತ್ತದೆ. ದೇವರಿಗೆ ಬಂದ ದುಡ್ಡು ಕೊಡದೇ ಇವರೇ ಹಿಂದೆ ಮುಂದೆ ನೋಡುತ್ತಿದ್ದಾರೆ. ದಯವಿಟ್ಟು ಅವರು ಜಾಸ್ತಿ ದುಡ್ಡು ಮಾಡಿಕೊಡಬೇಕು; ಒಳ್ಳೆಯದಾಗುತ್ತದೆ.

ಅಧ್ಯಕ್ಷರು:– ನಾನು 100 ಕೋಟಿ ರೂ ಕೊಡಲಿ ಎಂದು ಹೇಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ಈಗ ಹೆಚ್ಚಿಗೆ ಮಾಡುವುದು ಒಂದು ಕಡೆ ಇರಲಿ ಈಗ ಕೊಟ್ಟಂತಹ ಅನುದಾನವನ್ನು ಬಿಡುಗಡೆ ಯಾವ ರೀತಿ ಈ ಅವಧಿಯಲ್ಲಿ ಮಾಡುತ್ತಾರೆಂಬುದು ಬೇಕು. ಈಗ 2 ಲಕ್ಷ 12 ಸಾವಿರ ರೂ ಕೊಟ್ಟಿದ್ದಾರೆ, ಅದನ್ನೇ ಅವರು ಸಂಪೂರ್ಣ ಬಿಡುಗಡೆ ಮಾಡಬೇಕು ಅದನ್ನಾದರೂ ಈ ಅವಧಿಯಲ್ಲಿ ಬಿಡುಗಡೆ ಮಾಡಿ ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು ಏಕೆಂದರೆ ನಮ್ಮಲ್ಲಿ 40-50 ಲಕ್ಷ ರೂ ಬಾಕಿ ಇವೆ.

ಅಧ್ಯಕ್ಷರು:– ಈಗ ಏನು ಅನುದಾನ ಕೊಟ್ಟಿದ್ದಾರಲ್ಲಾ ಮಾರ್ಚ್ ಎಂಡ್ ಒಳಗೆ ದಯಮಾಡಿ ಬಿಡುಗಡೆ ಮಾಡಿಸಿ;

ಶ್ರೀಮತಿ ಸುಮಾ ವಸಂತ್:– ಮಾನ್ಯ ಸದಸ್ಯರು ಒಂದು ವಿಚಾರ ಕೇಳಿದರು. ಬೇರೆ ಬೇರೆ ದೇವಸ್ಥಾನಗಳಲ್ಲಿ ಹೆಚ್ಚಿಗೆ ಅನುದಾನ ಬಂದಿದ್ದನ್ನು ಬಿಡುಗಡೆ ಮಾಡಬಹುದಾ ಎಂದು ಕೇಳಿದರು. ಆದರೆ ನಮ್ಮಲ್ಲಿ ಈ ತರಹ ಆಕ್ಟ್ ಇರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಅಂದರೆ ಸುಬ್ರಹ್ಮಣ್ಯ, ಕಟೀಲು, ಕೊಲ್ಲೂರು ಇಂತಹ ದೇವಸ್ಥಾನದಲ್ಲಿ ಹೆಚ್ಚುವರಿ ಅನುದಾನವನ್ನು ಗ್ರಾಮಾಂತರ ಪ್ರದೇಶದ ದೇವಸ್ಥಾನಗಳಿಗೆ ಇವತ್ತು ಜೀರ್ಣೋದ್ಧಾರಕ್ಕೆ ಬಿಡುಗಡೆ ಮಾಡಿದ್ದೇವೆ.

ಆದರೆ ಬೇರೆ ಜಿಲ್ಲೆಯಲ್ಲಿ ನಮ್ಮ ಆಕ್ಷನ್ನು ಅಳವಡಿಸಿಲ್ಲ. ಆದ್ದರಿಂದ ಅದರ ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ:- ಮಾನ್ಯ ಮಂತ್ರಿಗಳು ಕೇಳಿದ ರೀತಿಯಲ್ಲಿ ಕೊಲ್ಲೂರು, ಸುಬ್ರಹ್ಮಣ್ಯ ಇಂತಹ ಕ್ಷೇತ್ರಗಳಲ್ಲಿ ವಿಶೇಷವಾದಂತಹ ಅಧಿಕಾರವನ್ನು ಅಲ್ಲಿಯ ದೇವಸ್ಥಾನಗಳಿಗೆ ಕೊಟ್ಟಿದ್ದಾರೆ. ಅದು ಏನು ಅಂದರೆ ಅಲ್ಲಿ ಬರುವಂತಹ ಉತ್ಪತ್ತಿಯಲ್ಲಿ ಸ್ವಲ್ಪಾಂಶವನ್ನು ಆ ಭಾಗದಲ್ಲಿರುವಂತಹ ವಿವಿಧ ಧಾರ್ಮಿಕ ಕ್ಷೇತ್ರಗಳಿಗೆ ಕೊಡ ಮಾಡುವಂತಹ ಒಂದು ವಿಶೇಷ ಅಧಿಕಾರವನ್ನು ಕೊಟ್ಟಿದ್ದಾರೆ. ಈಗಾಗಲೇ ಕೊಟ್ಟಂತಹ ಅಧಿಕಾರವನ್ನು ಇನ್ನಷ್ಟು ಸ್ವಲ್ಪ ಹೆಚ್ಚು ಮಾಡಬೇಕೆಂಬ ವಿನಂತಿ ನನ್ನದು. ಏಕೆಂದರೆ ಆಯಾಯ ಭಾಗದಲ್ಲಿ ಇರುವಂತಹದು. ಸುಬ್ರಹ್ಮಣ್ಯ ಪರಿಸರದಿಂದ ದಕ್ಷಿಣ ಭಾಗದ ಜಿಲ್ಲೆಗಳಿಗೆಲ್ಲಾ ಕೊಡಲಿಕ್ಕೆ ಅವಕಾಶ ಇದೆ.

ಅಧ್ಯಕ್ಷರು:- ಧರ್ಮಸ್ಥಳ ದೇವಸ್ಥಾನದವರು ಚಿಕ್ಕ ಪುಟ್ಟ ದೇವಸ್ಥಾನಗಳಿಗೆ ಕೊಡಬಹುದು.

ಶ್ರೀ ಡಿ.ವಿ. ಸದಾನಂದ ಗೌಡ:- ಧರ್ಮಸ್ಥಳ ಅದು ಪ್ರತ್ಯೇಕ. ಅದು ಇವರ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಸುಬ್ರಹ್ಮಣ್ಯ, ಕೊಲ್ಲೂರು ಎಲ್ಲಾ ಇವರ ವ್ಯಾಪ್ತಿಯಲ್ಲಿ ಬರುವಂತಹದು. ಇವರ ವ್ಯಾಪ್ತಿಯಲ್ಲಿ ಬರುವಂತಹ ಆದಾಯದಲ್ಲಿ ಶೇಕಡಾ 50 ಭಾಗವನ್ನು ಆ ಜಿಲ್ಲೆಯಲ್ಲಿರುವಂತಹ ವಿವಿಧ ದೇವಾಲಯಗಳಿಗೆ ಅಭಿವೃದ್ಧಿಗೆ ಕೊಡಲಿಕ್ಕೆ ವಿಶೇಷವಾದ ಅಧಿಕಾರವನ್ನು ಸರ್ಕಾರ ಕೊಟ್ಟರೆ ಬಹುಶಃ ಎಲ್ಲಾ ಧಾರ್ಮಿಕ ಕ್ಷೇತ್ರಗಳಲ್ಲಿ ಒಳ್ಳೆಯದಾಗಬಹುದು.

ಶ್ರೀ ಎ.ಎಸ್. ಗುರುಸ್ವಾಮಿ:- ಸಾರ್, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು:- ಹೇಳಿದ್ದಾರೆ. ಆಕ್ಕ ಪಕ್ಕದಲ್ಲಿರುವ ದೇವಸ್ಥಾನಗಳವರು ಬೇರೆ ದೇವಸ್ಥಾನಕ್ಕೆ ಕೊಟ್ಟರೆ ನಮ್ಮದೇನೂ ಅಭ್ಯಂತರ ಇಲ್ಲ ಎಂದು ಹೇಳಿದರು.

ಶ್ರೀ ಎ.ಎಸ್. ಗುರುಸ್ವಾಮಿ:- ಅವರು ಬಡ ದೇವರ ಬಗ್ಗೆ ಹೇಳಲಿಲ್ಲ. ದೇವರಲ್ಲೂ ಬಡ ದೇವರು ಇದ್ದಾರೆ. ಅದರ ಬಗ್ಗೆ ಅವರು ಹೇಳಲಿಲ್ಲ.

ಅಧ್ಯಕ್ಷರು:-ಎಲ್ಲಾ ಬಡ ದೇವರೇ, ಧರ್ಮಸ್ಥಳ, ತಿರುಪತಿ ಬಿಟ್ಟು ಬಿಟ್ಟರೆ ಎಲ್ಲಾ ದೇವರು ಬಡ ದೇವರೇ.

ಶ್ರೀಮತಿ ಸುಮಾವಸಂತ್:- ಸನ್ಮಾನ್ಯ ಸಭಾಧ್ಯಕ್ಷರೆ, ಸಾಧಾರಣವಾಗಿ ದೇವಸ್ಥಾನಗಳ ಅಭಿವೃದ್ಧಿಗೆ ಸಾರ್ವಜನಿಕರಿಂದ ದೇಣಿಗೆ ಪಡೆಯಬೇಕು. ಜನಗಳು ಮನಸ್ಸು ಮಾಡಬೇಕು ಸಾರ್ವಜನಿಕರಿಂದ ದೇಣಿಗೆ ತೆಗೆದುಕೊಂಡು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಬೇಕಾಗುತ್ತದೆ. ಅಲ್ಪಸ್ವಲ್ಪ ಮಾತ್ರ ನಾವು ಸರ್ಕಾರದಿಂದ ಅವರಿಗೆ ಜೀರ್ಣೋದ್ಧಾರಕ್ಕೆ ಅನುದಾನವನ್ನು ಕೊಡುತ್ತಿದ್ದೇವಷ್ಟೇ.

ಯುವ ಡಾಟ್ ಕಾಮ್‌ನಲ್ಲಿ ನಕಲಿಜಾಲ

100 (1197) ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು) : ಮಾನ್ಯ ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?